# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

51

| ವಾದಿಗಳು: | ಪ್ರತಿವಾದಿಗಳು: |
| --- | --- |
| ಶ್ರೀ ಕೆ.ಎರ್ರಿಸ್ವಾಮಿ ತಂದೆ ವಿರುಪಾಕ್ಷಪ್ಪ | ಕಂದಾಯ ನಿರೀಕ್ಷಕರು ಕೋಳೂರು |

**ವಿಷಯ:**-ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಬಸರಕೋಡು ಗ್ರಾಮದ ಸರ್ವೆ ನಂ:98/ಬಿ ವಿಸ್ತೀರ್ಣ:1.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಬಸರಕೋಡು ಗ್ರಾಮದ ಸರ್ವೆ ನಂ:98/ಬಿ ವಿಸ್ತೀರ್ಣ:1.00 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಪೆನ್ನ ಓಬಳೇಶ ತಂದೆ ಲಿಂಗಪ್ಪ ಇವರು ಶ್ರೀ ಕೆ.ಎರ್ರಿಸ್ವಾಮಿ ತಂದೆ ವಿರುಪಾಕ್ಷಪ್ಪ ಇವರಿಗೆ ಉಪನೊಂದಾಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆBLY-1-1239-2015-16ರ ಪ್ರಕಾರ ದಿನಾಂಕ:28-12-2015 ರಂತೆ ಖರೀದಿಗೆ ಮರಾಟ ಮಾಡಿರುತ್ತಾರೆ. ಕಾರಣ ಖರೀದಿದಾರರು ಹಕ್ಕು ಬದಲಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು ಕೋಳೂರು ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಸದ್ರಿ ಅರ್ಜಿದಾರರು ಪಹಣಿಯ ಬಗ್ಗೆ ಸರಿಯಾದ ದಾಖಲೆಗಳನ್ನು ಸಲ್ಲಿಸದ ಕಾರಣ ಸದ್ರಿ ಹಕ್ಕು ಬದಲಾವಣೆ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:04-04-2016, ಮತ್ತು 23-05-2016 ರಂದು ವಿಚಾರಣೆ ನಡೆಸಲಾಗಿ ಖರೀದಿದಾರರು ಪ್ರಕರಣಕ್ಕೆ ಹಾಜರಾಗಿ ತಾವು ಕೃಷಿ ಕುಟುಂಬದವರು ಎಂದು ಸದ್ರಿ ಕ್ರಯದಾರರ ತಂದೆ ಶ್ರೀ ವಿರುಪಾಕ್ಷಪ್ಪ ತಂದೆ ರುದ್ರಪ್ಪ ಇವರ ಹೆಸರಿನಲ್ಲಿ ಬಸರಕೋಡು ಗ್ರಾಮದ ಸರ್ವೆ ನಂ:63/ಸಿ ವಿಸ್ತೀರ್ಣ:2.53 ಎಕರೆ ಜಮೀನಿದ್ದು ಕೃಷಿ ಕುಟುಂಬದವರಾಗಿರುತ್ತಾರೆ. ಮತ್ತು ವಂಶವೃಕ್ಷ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ.

**-::ಆದೇಶ::-**

ಸಂ/ಕಂ/ವಿವಾದ/90/2016-17

ದಿನಾಂಕ:20/6/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಬಸರಕೋಡು ಗ್ರಾಮದ ಸರ್ವೆ ನಂ:98/ಬಿ ವಿಸ್ತೀರ್ಣ:1.00 ಎಕರೆ ಜಮೀನನ್ನು ಉಪನೊಂದಾಣೆ ಅಧಿಕಾರಿಗಳು, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆಃಐಜ-1-1239-2015-16ರ ಪ್ರಕಾರ ದಿನಾಂಕ:28-12-2015 ರಂತೆ ಶ್ರೀ ಕೆ.ಎರ್ರಿಸ್ವಾಮಿ ತಂದೆ ವಿರುಪಾಕ್ಷಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 20-6-2016 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ.

ತಹಶೀಲ್ದಾರರು, ಬಳ್ಳಾರಿ.
Tasildar, Bellary.

**ಪ್ರತಿಯನ್ನು:**

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.